





ಜನ ತೋರಿಸಿದರು. ಸಾಕು ಬಿಡಯ್ಯಾ ಇನ್ನೇನಾಗಬೇಕಾಗಿದೆ...' ಎಂದು ಇದೇ ವರ್ಷ ಆಗಸ್ಟ್‌ನಲ್ಲಿ 'ಕ್ರಾಂತಿ' ಸಿನಿಮಾ ಪ್ರಚಾರದ ಸಂದರ್ಭದಲ್ಲೇ ದರ್ಶನ್ ಹೇಳಿಕೆ ಸಾಮಾಜಿಕ ಜಾಲತಾಣದಲ್ಲಿ ಪ್ರಕಟವಾಗಿತ್ತು. ಪುನೀತ್ ಅಭಿಮಾನಿಗಳು ಈ ಹೇಳಿಕೆಗೆ ಕಿಡಿಕಾರಿದ್ದರು.

ಆ ಕಿಡಿ ಸಾಮಾಜಿಕ ಜಾಲತಾಣದಲ್ಲಿ ನಿಧನಿಧಾನ ವ್ಯಾಪಕವಾಗುತ್ತಾ ಹೋಯಿತು. ದರ್ಶನ್ ಅವರನ್ನು ಸಮರ್ಥಿಸಿಕೊಂಡು ನಿರ್ದೇಶಕ ದುನಿಯಾ ಸೂರಿ ಒಂದು ಪೋಸ್ಟ್ ಹಾಕಿ, ಅವರ ಮಾತನ್ನು ಅಪಾರ್ಥ ಮಾಡಿಕೊಳ್ಳಲಾಗಿದೆ ಎಂದರು. ಆಮೇಲೆ 'ಕ್ರಾಂತಿ' ಚಿತ್ರದ ನಿರ್ಮಾಪಕಿ ಶೈಲಜಾ ನಾಗ್ ಅವರನ್ನೂ ಅನೇಕರು ಟ್ರೋಲ್ ಮಾಡಿದರು.

ಸಾಮಾಜಿಕ ಜಾಲತಾಣದ ವ್ಯೋಮಲೋಕದಲ್ಲಿ ಇಷ್ಟೆಲ್ಲ ನಡೆಯುತ್ತಿರುವಾಗ ದರ್ಶನ್ ತಮ್ಮ ಮಾತಿನ ಅಪಾರ್ಥದ ಕುರಿತು ಏನೊಂದನ್ನೂ ಹೇಳಲಿಲ್ಲ. ಅಭಿಮಾನಿಗಳು ಪರಸ್ಪರ ದೈಹಿಕವಾಗಿ ಕಿತ್ತಾಡಿಕೊಳ್ಳುವ ಮಟ್ಟಕ್ಕೆ ಹೋಗಬಹುದು ಎಂದು ಅಂದಾಜು ಮಾಡುವುದು ಈಗ ಕಷ್ಟವೇನಲ್ಲ. ಅದರ ಗೊಡವೆಗೆ ಅವರು ಹೋಗಲಿಲ್ಲ. ಹೊಸಪೇಟೆಯಲ್ಲಿ ತಮ್ಮತ್ತ ಚಪ್ಪಲಿ ಬಂದಾಗ, 'ಇರಲಿ ಬಿಡು... ಚಿನ್ನ' ಎಂದು ತಮ್ಮ ಎಂದಿನ ಶೈಲಿಯಲ್ಲಿ ತಲೆಯಾಡಿಸಿ ನಿಂತರು.

ಆ ಘಟನೆ ನಡೆದಮೇಲೆ ರಾಜ್‌ಕುಮಾರ್ ಅವರ ಮೊಮ್ಮಗ ಯುವ ರಾಜ್‌ಕುಮಾರ್ ಬಹಳ ಮಾರ್ಮಿಕ ಪೋಸ್ಟ್ ಒಂದನ್ನು ಮಾಡಿದರು. 'ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಮಾತನಾಡಲು ನಾನು ತುಂಬ ಚಿಕ್ಕವನು...' ಎಂದು ಶುರುವಾಗುವ ಅವರ ಪೋಸ್ಟ್, 'ನಡೆದಿರುವ ಕೃತ್ಯ ಖಂಡನೀಯ. ಯಾರೋ ಮಾಡಿದ ತಪ್ಪನ್ನು ಮತ್ತೊಬ್ಬರ ಮೇಲೆ ಹಾಕುವುದರಿಂದ 'ಸುಳ್ಳು ಸತ್ಯವಾಗುವುದಿಲ್ಲ'. ಪೊಲೀಸ್ ತನಿಖೆ ನಡೆಯುತ್ತಿದೆ. ತಪ್ಪಿತಸ್ಥ ಯಾರೇ ಆಗಿದ್ದರೂ ಅವರಿಗೆ ಶಿಕ್ಷೆ ಖಂಡಿತ ಆಗುತ್ತದೆ' ಎಂದು ಅವರ ಪೋಸ್ಟ್ ಮುಗಿಯುತ್ತದೆ. ನಡುವಿನ ಪ್ಯಾರಾದಲ್ಲಿ, 'ಗೌರವ ಯಾವಾಗಲೂ ಪರಸ್ಪರ ಅಲ್ವಾ? ಅಪ್ಪು ಚಿಕ್ಕಪ್ಪನ ನಡವಳಿಕೆ, ಸಾಮಾಜಿಕ ಪ್ರಜ್ಞೆ, ಮಹಿಳೆಯರನ್ನು ಗೌರವಿಸುವುದು, ಎಲ್ಲರನ್ನೂ ಪ್ರೀತಿಸುವ ಅವರ ವ್ಯಕ್ತಿತ್ವದ ಬಗ್ಗೆ ಪ್ರತಿಯೊಬ್ಬರಿಗೂ ಚೆನ್ನಾಗಿ ತಿಳಿದಿದೆ' ಎಂಬೊಂದು ಅರ್ಥಪೂರ್ಣ ಒಕ್ಕಣೆ ಇದೆ. ಯುವ ರಾಜ್‌ಕುಮಾರ್ ಕೂಡ 'ಅಭಿಮಾನಿಗಳೇ ದೇವರು' ಎಂದೂ ಬರೆದಿದ್ದಾರೆ.

ರಾಜ್‌ಕುಮಾರ್ ಕುಟುಂಬದ ಸಾಂಸ್ಕೃತಿಕ ಕೊಡುಗೆಯನ್ನು ನೆನೆಯುತ್ತಾ ನಟ ದುನಿಯಾ ವಿಜಿ, ದರ್ಶನ್ ಅವರಿಗೇ ಸಣ್ಣದೊಂದು ಬೇಡಿಕೆಯನ್ನು ತಮ್ಮ ಪೋಸ್ಟ್ ಮೂಲಕ ಇಟ್ಟರು. ಚಪ್ಪಲಿ ಎಸೆದ ಅಭಿಮಾನಿಯನ್ನೇ ಚಿನ್ನ ಎಂದು ತಣ್ಣಗೆ ಪ್ರತಿಕ್ರಿಯಿಸಿ ಸುಮ್ಮನಾಗಿಸಿದ ಅವರು ಇನ್ನೊಂದು ಮಾತು ಹೇಳಿದರೆ ಅಭಿಮಾನಿಗಳೆಲ್ಲ ಗೆರೆ ದಾಟಲು ಹೋಗದಿರುವರು ಎನ್ನುವ ಕಳಕಳಿ ವಿಜಿ ವಿನಂತಿಯಲ್ಲಿ ಇತ್ತು.

ಅಭಿಮಾನಿಗಳ ಜಗಳ ಲಾಗಾಯ್ತಿನಿಂದ ಇದೆ. ರಾಜ್‌ಕುಮಾರ್ ಹಾಗೂ ವಿಷ್ಣುವರ್ಧನ್ ಅಭಿಮಾನಿಗಳಲ್ಲಿಯೂ ಅನೇಕರು ಹಾವು–ಮುಂಗುಸಿಗಳಂತೆ ಇದ್ದರು. ಆದರೆ, ಸಾಮಾಜಿಕ ಜಾಲತಾಣಗಳೇ ಇಲ್ಲದ ಆ ಕಾಲದಲ್ಲಿ ರಾಜ್‌ಕುಮಾರ್ ಹಾಗೂ ವಿಷ್ಣುವರ್ಧನ್ ಇಬ್ಬರೂ ಆಗೀಗ ನಗೆ ಬೀರುತ್ತಾ, ಪರಸ್ಪರ ಪ್ರೀತಿಯ ಮಾತನಾಡುತ್ತಾ ಅಭಿಮಾನಿಗಳ ಕುದಿಯನ್ನು ತಣ್ಣಗಾಗಿಸಿದ ಅಸಂಖ್ಯ ಉದಾಹರಣೆಗಳಿವೆ. ಸುದೀಪ್ ಹಾಗೂ ಶಿವರಾಜ್‌ಕುಮಾರ್ ಬೇರೆ ಬೇರೆ ತಂಡಗಳಲ್ಲಿ ಕ್ರಿಕೆಟ್ ಆಡಿದಾಗ ಇಬ್ಬರ ನಡುವೆ ಏನೋ ನಡೆದಿದೆ ಎಂದು ಅಭಿಮಾನಿಗಳು ಕುದ್ದಿದ್ದನ್ನು ಕಂಡೆವು. ಆಮೇಲೆ ಈ ಇಬ್ಬರೂ ನಟರು ಒಂದೇ ಸಿನಿಮಾದಲ್ಲಿ ಅಭಿನಯಿಸಿ, ಎಲ್ಲ ಟೀಕಾಬೆಂಕಿಗೂ ನೀರು ಸುರಿದರು. ಸುದೀಪ್ ಹಾಗೂ ದರ್ಶನ್ ಪರಸ್ಪರ ಮಾತಾಡದೇ ಇದ್ದರೂ ಒಬ್ಬರ ಕುರಿತು ಇನ್ನೊಬ್ಬರಲ್ಲಿ ಪ್ರಶ್ನೆ ಕೇಳಿದಾಗಲೆಲ್ಲ ಕೆಟ್ಟದೇನನ್ನೂ ಹೇಳದೇ ಇರುವ ಸಹನೀಯ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ.

ತಾರಾವರ್ಚಸ್ಸು ಇರುವವರು ಹಳೆಬೇರಿನ ಕಡೆಗೊಮ್ಮೆ ನೋಡಬೇಕು. ದರ್ಶನ್ ಅವರ ಒಂದು ಮಾತಿಗೆ ಈಗ ಅಭಿಮಾನಿಗಳ ನಡುವೆ ಹೊತ್ತಿರುವ ಬೆಂಕಿ ತಣ್ಣಗಾಗಿಸುವ ಶಕ್ತಿ ಇದೆ. ಸುಖಾಸುಮ್ಮನೆ ಕಣ್ಣಾಲಿಗಳು ತುಂಬುವಷ್ಟು ನೆನಪುಗಳನ್ನು ಭೂಮಿ ಮೇಲೆ ಬಿಟ್ಟು ಹೋಗಿರುವ ಪುನೀತ್ ಅಗಲಿಕೆಯ ಸೂತಕದ ಈ ಹೊತ್ತಿನಲ್ಲಿ ಅಭಿಮಾನಿಗಳ ಕಾಳ್ಗಿಚ್ಚು ಹೇಯ. ಇದು ತಾರಾವರ್ಚಸ್ಸನ್ನು ಉಜ್ಜುವವರಿಗೆ, ಮನುಷ್ಯತ್ವವನ್ನು ಎಲ್ಲೋ ಬಿಟ್ಟು ಬರುವ ಅಭಿಮಾನಿಗಳಿಗೆ ಅರ್ಥವಾದರೆ ಸಾಕು.

ಪ್ರತಿಕ್ರಿಯಿಸಿ: feedback@sudha.co.in